ಶ್ರೀ ಕೃಷ್ಣಮೂರ್ತಿ ಕೆ ಎಂ (ಕಡೂರು)109(361)

ಮಾನ್ಯ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಲೆಮಾರಿ ಜನಾಂಗದವರ ಗ್ರಾಮ/ಕಾಲೋನಿಗಳಿಗೆ ಒಂದು ವರ್ಷದಿಂದ ಕುಡಿಯುವ ನೀರಿನ ಓವರ್‌ಹೆಡ್ ಟ್ಯಾಂಕ್ ಯೋಜನೆ ಸರ್ಕಾರದಿಂದ ಮಂಜೂರಾದರೂ ಯೋಜನೆ ಪ್ರಾರಂಭಿಸಿ ಪೂರ್ಣ ಗೊಳಿಸಿರುವುದಿಲ್ಲ,

1) ತುಮಕೂರು ಜಿಲ್ಲೆ, ಮಧುಗಿರಿ ತಾಲ್ಲೂಕು, ಗಿರಿಗೌಡನ ಹಳ್ಳಿ, 2) ತುಮಕೂರು ಜಿಲ್ಲೆ, ಮಧುಗಿರಿ ತಾಲ್ಲೂಕು, ಬಡ್ಲೂಂಡನ ಹಳ್ಳಿ, 3) ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಮಾಗೋಡು ಗ್ರಾಮ, 4) ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು, (1)ಆದಿನಹಟ್ಟಿ ಗ್ರಾಮ (2)ತಿರುಮಲಾಪುರ ಗ್ರಾಮ

ಆ) ಈ ಗ್ರಾಮಗಳಿಗೆ ಎಷ್ಟು ದಿನದಲ್ಲಿ ಕಾಮಗಾರಿ ಪೂರ್ಣಗೊಳಿಸಿ ಸೌಲಭ್ಯ ಕಲ್ಪಿಸಲಾಗುವುದು?

ಎಸ್ ಎ ರವೀಂದ್ರನಾಥ್

ಅ)ತುಮಕೂರು ಜಿಲ್ಲೆ, ಮಧುಗಿರಿ ತಾಲ್ಲೂಕು, ಗಿರಿಗೌಡನ ಹಳ್ಳಿ, ನೀರಿನ ಮೇಲ್ತೊಟ್ಟಿ (OHT) ಕಾಮಗಾರಿ ಪ್ರಗತಿಯಲ್ಲಿದೆ ಆದರೆ ಮಧುಗಿರಿ ತಾಲ್ಲೂಕಿನ ಬಡ್ಲೂಂಡನ ಹಳ್ಳಿ, ಶಿರಾ ತಾಲ್ಲೂಕಿನ ಮಾಗೋಡು ಗ್ರಾಮ ಹಾಗೂ ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕಿನ ಆದಿನಹಟ್ಟಿ ಮತ್ತು ತಿರುಮಲಾಪುರ ಗ್ರಾಮಗಳಿಗೆ (OHT) ಮಂಜೂರಾಗಿರುವುದಿಲ್ಲ ಈ ಎಲ್ಲಾ ಗ್ರಾಮಗಳಲ್ಲೂ ಜನಸಂಖ್ಯೆಗನುಗುಣವಾಗಿ ಅಗತ್ತಯ ಕೊಳವೆ ನೀರು, ಕಿರು ನೀರು ಮತ್ತು ಕೈಪಂಪು ಕೊಳವೆ ಬಾವಿ ಯೋಜನೆಗಳನ್ನು ಈಗಾಗಲೇ ಒದಗಿಸಲಾಗಿದೆ

ಆ) ಗಿರಿಗೌಡನ ಹಳ್ಳಿ, ನೀರಿನ ಮೇಲ್ತೊಟ್ಟಿ (OHT) ಕಾಮ ಗಾರಿಗಳನ್ನು ಮಾರ್ಚ್ 2008 ರೊಳಗಾಗಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ

ಶ್ರೀ ಕೃಷ್ಣಮೂರ್ತಿ ಕೆ ಎಂ (ಕಡೂರು)110(362)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದಲ್ಲಿ ಅಲೆಮಾರಿ ಜನಾಂಗದವರು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಮನೆ/ನಿವೇಶನ ರಹಿತರ ಸಮೀಕ್ಷೆ ನಡೆಸಲಾಗಿದೆಯೇ,

ಇ) ಈ ಜನಾಂಗದವರ ಮನೆ/ನಿವೇಶನ ರಹಿತರ ತಾಲ್ಲೂಕುವಾರು ಮಾಹಿತಿ ನೀಡಿ, ಇಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು,

ಈ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಮಾದರಿಯಲ್ಲಿ ಈ ಜನಾಂಗದವರಿಗಾಗಿ 2007–08ನೇ ಸಾಲಿನಲ್ಲಿ "ಒಂದು" ವಿಶೇಷ ವಸತಿ ಯೋಜನೆಯನ್ನು ರೂಪಿಸಿ ಜಾರಿಗೊಳಿಸುವುದೇ,

ಉ) 1991–92ನೇ ಸಾಲಿನ ಸರ್ಕಾರದ ಆದೇಶ ಸಂಖ್ಯೆ, ಹೆಚ್‌ಯು ಡಿ 407 ಕೆಹೆಚ್‌ಬಿ 91, ದಿನಾಂಕ 24 06 1991 ರ ಆದೇಶದಲ್ಲಿ ಶೇ 10ರ ಮೀಸಲಾತಿಯನ್ವಯ ಆಶ್ರಯ ಯೋಜನೆಯಲ್ಲಿ ಮನೆ/ನಿವೇಶನ ಹಂಚಲು ಆದೇಶವಿರುವುದನ್ನು ಸಮರ್ಪಕವಾಗಿ ಜಾರಿಗೊಳಿಸಲಾಗಿದೆಯೇ,

ಊ) ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು, ಈ ಆದೇಶವನ್ನು ಪುನರ್ ಜಾರಿಗೊಳಿಸುವ ಸರ್ಕಾರದ ಕ್ರಮವೇನು?